# ಶೇಷಾದ್ರಿ ಗಾಂಧಿ ಧ್ಯಾನ

ನಿರ್ದೇಶಕ ಪಿ. ಶೇಷಾದ್ರಿ ಈಗ ಗಾಂಧಿ ಧ್ಯಾನದಲ್ಲಿದ್ದಾರೆ. ಅವರೇ ನಿರ್ಮಾಣ ಮಾಡಿ ನಿರ್ದೇಶಿಸುತ್ತಿರುವ 'ಮೋಹನದಾಸ' ಸಿನಿಮಾದ ಅಂತಿಮ ಹಂತ ಚಿತ್ರೀಕರಣದಲ್ಲಿ ಬ್ಯುಸಿಯಾಗಿದ್ದಾರೆ. ಕನ್ನಡ, ಇಂಗ್ಲಿಷ್ ಮತ್ತು ಹಿಂದಿ ಈ ಮೂರು ಭಾಷೆಗಳಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರದ ಕುರಿತು ಇನ್ನೂ ಹಲವು ಮಹತ್ವದ ಕನಸುಗಳ ಸಾಕಾರಕ್ಕೂ ಅವರು ಪ್ರಯತ್ನಿಸುತ್ತಿದ್ದಾರಂತೆ. ಅವುಗಳಲ್ಲಿ ಒಂದು ಬಾಲಿವುಡ್‌ನ ಅಮಿತಾಭ್ ಬಚ್ಚನ್ ಅವರನ್ನು ಕರೆತರುವುದು. ಅದಕ್ಕಾಗಿ ಅವರು ಸಾಕಷ್ಟು ಪ್ರಯತ್ನ ಪಡುತ್ತಿದ್ದಾರಂತೆ.

ಬೊಳುವಾರು ಮಹಮದ್ ಕುಞ ಅವರ 'ಪಾಪು ಗಾಂಧಿ, ಬಾಪು ಗಾಂಧಿ ಆದ ಕಥೆ' ಮತ್ತು ಮಹಾತ್ಮ ಗಾಂಧಿಯವರ ಆತ್ಮಚರಿತ್ರೆಯನ್ನು ಆಧರಿಸಿ ಈ ಚಿತ್ರದ ಚಿತ್ರಕಥೆಯನ್ನು ಹೆಣೆಯಲಾಗಿದೆ. ಗಾಂಧಿಯ ಪಾತ್ರದಲ್ಲಿ ಖ್ಯಾತ ನಟ ಅನಂತ್ ಮಹಾದೇವನ್ ನಟಿಸಿದ್ದಾರೆ. ಗಾಂಧೀಜಿ ತಾಯಿ ಪುತಲಿಬಾಯಿ ಪಾತ್ರದಲ್ಲಿ ಶ್ರುತಿ ಕಾಣಿಸಿಕೊಳ್ಳಲಿದ್ದಾರೆ. ಬಾಲಕ ಗಾಂಧಿಯಾಗಿ ಮೈಸೂರಿನ ಸಮರ್ಥ ಎಂಬ ಹುಡುಗ ನಟಿಸಿದ್ದಾನೆ. ಗುಜರಾತ್‌ನ ಪೋರಬಂದಿರ್ ಮತ್ತು ರಾಜಕೋಟ್‌ನಲ್ಲಿಯೇ ಚಿತ್ರದ ಬಹುತೇಕ ಭಾಗವನ್ನು ಚಿತ್ರೀಕರಿಸಿಕೊಳ್ಳಲಾಗಿದೆ.

ಭಾಸ್ಕರ್ ಈ ಚಿತ್ರಕ್ಕೆ ಛಾಯಾಗ್ರಹಣ ಮಾಡುತ್ತಿದ್ದಾರೆ. ಪ್ರವೀಣ್ ಗೋಡ್ಖಿಂಡಿ ಸಂಗೀತ ಸಂಯೋಜಿಸುತ್ತಿದ್ದಾರೆ. ಅಕ್ಟೋಬರ್ 2ರಂದು, ಗಾಂಧೀಜಿ ಜನ್ಮದಿನಾಚರಣೆಯ ಸಂದರ್ಭದಲ್ಲಿಯೇ ಈ ಚಿತ್ರವನ್ನು ಮೂರೂ ಭಾಷೆಗಳಲ್ಲಿ ಬಿಡುಗಡೆ ಮಾಡುವ ಯೋಚನೆ ನಿರ್ದೇಶಕರಿಗಿದೆ. ■



ಚಿತ್ರ: ಕೃಷ್ಣಕುಮಾರ್ ಪಿ.ಎಸ್.



ಚಿತ್ರ: ಅಭಿಷೇಕ್ ಎಸ್.ಎನ್.

## ಸೋನುಗೆ ರತ್ನದಂಥ ಚಾನ್ಸ್!

ಇತ್ತೀಚೆಗೆ ಬಿಡುಗಡೆಯಾದ 'ಐ ಲವ್ ಯೂ' ಸಿನಿಮಾದಲ್ಲಿ ಸೋನು ಗೌಡ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಇದೀಗ ಸಂತೋಷ್ ಆನಂದ್‌ರಾಮ್ ನಿರ್ದೇಶನದ, ಪುನೀತ್ ರಾಜ್‌ಕುಮಾರ್ ಅಭಿನಯದ 'ಯುವರತ್ನ' ಸಿನಿಮಾದಲ್ಲಿಯೂ ನಟಿಸುವ ಅವಕಾಶ ಅವರಿಗೆ ಒದಗಿಬಂದಿದೆ. ಈ ಚಿತ್ರದಲ್ಲಿಯೂ ಗೆಸ್ಟ್ ಅಪಿಯರೆನ್ಸ್ ಮಾಡ್ತಾ ಇದ್ದೀರಾ ಎಂದು ಕೇಳಿದರೆ 'ಇಲ್ಲ ಇಲ್ಲ... ಇದು ತುಂಬ ಮುಖ್ಯವಾದ ಪಾತ್ರ. 25 ದಿನಗಳ ಕಾಲ್‌ಶೀಟ್ ಕೇಳಿದ್ದಾರೆ. ಅಭಿನಯಕ್ಕೆ ಸಾಕಷ್ಟು ಸ್ಕೋಪ್ ಇರುವಂಥ ಪಾತ್ರ' ಎಂದು ಹೇಳುತ್ತಾರೆ. ಜುಲೈ 26ರಿಂದ ಆರಂಭವಾಗಿರುವ ಶೆಡ್ಯೂಲ್‌ನಲ್ಲಿ ಸೋನು ನಟಿಸುತ್ತಿದ್ದಾರೆ. ಆದರೆ ಇದರಾಚೆಗೆ ಪಾತ್ರದ ಕುರಿತು, ಕಥೆಯ ಕುರಿತು ತುಟಿಬಿಚ್ಚುವಂತಿಲ್ಲ ಎಂದು ಚಿತ್ರತಂಡ ತಾಕೀತು ಮಾಡಿದೆಯಂತೆ.

ಸೋನು ಅಭಿನಯದ 'ಶಾಲಿನಿ ಐಎಎಸ್' ಮತ್ತು 'ರೆಡ್' ಸಿನಿಮಾಗಳು ಇನ್ನಷ್ಟೇ ಬಿಡುಗಡೆಯಾಗಬೇಕಿದೆ. ಜೊತೆಗೆ ಅವರು ಮತ್ತೊಂದು ಚಿತ್ರಕ್ಕೆ ನಾಯಕಿಯಾಗಿ ನಟಿಸಲು ಸಹಿ ಹಾಕಿದ್ದು, ವರಮಹಾಲಕ್ಷ್ಮಿ ಹಬ್ಬಕ್ಕೆ ವಿವರಗಳನ್ನು ಬಹಿರಂಗಪಡಿಸುವ ಯೋಜನೆ ಹಾಕಿಕೊಂಡಿದ್ದಾರೆ. 'ಗುಲ್ಟು' ಸಿನಿಮಾದ ನಂತರ ಮತ್ತೊಂದು ಹಿಟ್‌ಗೆ ಕಾಯುತ್ತಿರುವ ಸೋನು, ವರಮಹಾಲಕ್ಷ್ಮಿಯ ಆಶೀರ್ವಾದ, ಯಶಸ್ಸಿನ ಫಲ ಕೊಡುತ್ತದೆ ಎಂಬ ನಂಬಿಕೆಯಲ್ಲಿದ್ದಾರೆ. ■